ಅಲ್ಲೆಲ್ಲಾ ನನ್ನ ಜತೆ ವ್ಯಾಸನಿದ್ದಾನೆ. ಪ್ರೇಕ್ಷಕರನ್ನು ಸದಭಿರುಚಿಯ ಸಿನಿಮಾದ ಕಡೆಗೆ ಕೊಂಡೊಯ್ಯುವ ಜತೆಗೆ ಫಿಲಂ ಮೇಕರ್ ಅನ್ನೂ ಜನಸಾಮಾನ್ಯರಿಗೆ ಪರಿಚಯಿಸುವ ಕೆಲಸದಲ್ಲಿ ಪ್ರಥಮ ವ್ಯಕ್ತಿಯಾಗಿ ಆಗಿ ವ್ಯಾಸ ನನ್ನ ಜತೆಗಿದ್ದ.

ನನ್ನ ಮತ್ತು ಅವನ ಬಾಂಧವ್ಯ ಎಷ್ಟೊಂದು ಅದ್ಭುತವಾಗಿತ್ತೆಂದರೆ ಎಷ್ಟೋ ಬಾರಿ ನಾನು ಆಹ್ವಾನಿತನಾಗಿ ಹೋಗಬೇಕಿದ್ದ ಕಾರ್ಯಕ್ರಮಗಳಿಗೆ ಅವನನ್ನು ಕಳಿಸಿದ್ದೇನೆ. ನನ್ನ ಮತ್ತು ಅವನ ನಡುವೆ ಅಷ್ಟೊಂದು ಅರ್ಥೈಸುವಿಕೆಯಿತ್ತು. ಲಕ್ಷ್ಮಣರಾವ್‌ಗೆ ನಾನು ಓ.... ಲಕ್ಷ್ಮಣ ಅಂತ ಕರೆದರೆ, ವ್ಯಾಸನಿಗೆ ಓ ಗೆಳೆಯಾ ಅನ್ನುತ್ತಿದ್ದೆ. ಅವನೂ ಗೆಳೆಯ ಅಂತಲೇ ಮಾತು ಆರಂಭಿಸುತ್ತಿದ್ದ. ರಂಗಭೂಮಿಯಿಂದ ಬಂದ ನನ್ನ ಎಲ್ಲಾ ನಾಟಕಗಳನ್ನು ವ್ಯಾಸ ನೋಡಿದ್ದಾನೆ. ನಾನು ಒಂದು ನಾಟಕದಲ್ಲಿ ಇದ್ದೀನಿ ಅಂದರೆ ಆ ನಾಟಕ ಚೆನ್ನಾಗಿ ಆಗುತ್ತೆ ಅನ್ನೋದು ಅವನ ನಂಬಿಕೆಯಾಗಿತ್ತು.

ಶ್ರೀಹರಿ ಖೋಡೆ ಅವರು ನಿರ್ಮಾಪಕರಾಗಿ ಸಿಕ್ಕಾಗ 'ಮೈಸೂರ ಮಲ್ಲಿಗೆ' ಸಿನಿಮಾಕ್ಕೆ ನಾನು ಮತ್ತು ಸಿ. ಅಶ್ವತ್ಥ ಹಿಂದೆ ಮುಂದೆ ಏನನ್ನೂ ಪ್ಲಾನ್ ಮಾಡದೇ ಒಪ್ಪಿಕೊಂಡು ಬಿಟ್ಟೆವು. ಕೆ.ಎಸ್. ನರಸಿಂಹಸ್ವಾಮಿ ಅವರಿಗಿಂತ ಮುನ್ನ ಬೇಂದ್ರೆ ಅಥವಾ ರಾಜರತ್ನಂ ಅವರ ಪದ್ಯಗಳನ್ನಿಟ್ಟುಕೊಂಡು ಸಿನಿಮಾ ಮಾಡಬೇಕೆಂದು ಕೊಂಡಿದ್ದೆವು. ಅದು ಸಫಲವಾಗದೇ ನರಸಿಂಹಸ್ವಾಮಿ ಅವರ ಕವನಗಳನ್ನು ಆರಿಸಿಕೊಂಡೆವು. ಏನಿಲ್ಲವೆಂದರೂ ಒಂದು ವರ್ಷ ಕಾಲ ಹತ್ತು ಕತೆಗಾರರಿಗೆ ಈ ಸಿನಿಮಾಕ್ಕೆ ಕತೆ ಬರೆದುಕೊಡಿ ಅಂತ ಕೇಳಿಕೊಂಡೆವು. ಎಲ್ಲರೂ ಸಿನಿಮಾದಲ್ಲಿ 15 ಹಾಡುಗಳಿರಬೇಕೆಂಬ ಕರಾರು ನೋಡಿ ಹಿಂದಕ್ಕೆ ಸರಿಯುತ್ತಿದ್ದರು. ಆದರೆ, ವ್ಯಾಸನಿಗೆ ಮಾತ್ರ ನಾನು ಈ ಸಿನಿಮಾ ಮಾಡಿಯೇ ತೀರುತ್ತೇನೆಂಬ ಅಪಾರ ನಂಬಿಕೆ ಇತ್ತು. ಅದಕ್ಕೆ ತಕ್ಕಂತೆ ಅವನು ನನ್ನನ್ನು ಪರೋಕ್ಷವಾಗಿ ಅಣಿಗೊಳಿಸಿದ.

ಕತೆಯೊಂದು ಫಾರಂ ಆದ ತಕ್ಷಣ ಅವನನ್ನು ಕೂರಿಸಿಕೊಂಡು ಹೇಳುತ್ತಿದ್ದೆ. ನಮ್ಮ ಗುಂಪಿನ ಸ್ನೇಹಿತರ ಜತೆಗೂ ಚರ್ಚಿಸುತ್ತಿದ್ದೆ. ಇಬ್ಬರೂ ಜತೆಗಿರುತ್ತಿದ್ದಾಗ ವ್ಯಾಸ ನರಸಿಂಹಸ್ವಾಮಿ ಕವನಗಳನ್ನು ವಿಶ್ಲೇಷಿಸುತ್ತಿದ್ದ. ಇದು ನನ್ನಲ್ಲಿ ಕಥಾ ಹಂದರ ರೂಪುಗೊಳ್ಳಲು ಸಹಾಯವಾಯಿತು. ಕೊನೆಗೆ ನಾನು, ವ್ಯಾಸ, ಅಶ್ವತ್ಥ ಮೂವರೂ ಸೇರಿ 'ಮೈಸೂರ ಮಲ್ಲಿಗೆ' ಸಿನಿಮಾಕ್ಕೆ ಪ್ರೇಮಕತೆ ಫಾರಂ ಹಾಕಿದೆವು. ಸ್ನೇಹಿತರೊಬ್ಬರು ಇದರಲ್ಲಿ ಸಂಘರ್ಷವೇ ಇಲ್ಲ ಅಂದಾಗ ಕಹಳೆಬಂಡೆ ಉದ್ಯಾನದಲ್ಲಿ ಕುಳಿತು ಮಧ್ಯರಾತ್ರಿ ಹೊತ್ತಿಗೆ ಸ್ವಾತಂತ್ರ್ಯ ಹೋರಾಟ ಸೇರಿಸಬೇಕು ಅಂತ ತೀರ್ಮಾನಿಸಿದೆವು. ಅದಕ್ಕೆ ಹಲವರಿಂದ ಅಪಸ್ವರಗಳು ಕೇಳಿಬಂದಾಗ ನನ್ನ ನಿಲುವಿಗೆ ಬೆನ್ನೆಲುಬಾಗಿ ನಿಂತವನು ವ್ಯಾಸ. ಈ ಸಿನಿಮಾಕ್ಕೆ 'ಬಿಡುಗಡೆ' ಅನ್ನುವ ಕವನವನ್ನೂ ಆರಿಸಿಕೊಟ್ಟ. ಇದೇ ಸಿನಿಮಾ ಮುಂದೆ ಭಾರತೀಯ ಚಿತ್ರರಂಗದಲ್ಲಿ ಇತಿಹಾಸ ನಿರ್ಮಿಸಿತು. ಬರೀ ಕವನಗಳನ್ನು ಇಟ್ಟುಕೊಂಡು ಮಾಡಿದ ಮೊದಲ ಸಿನಿಮಾ ಎನ್ನುವ ಹೆಗ್ಗಳಿಕೆಗೆ ಪಾತ್ರವಾಯಿತು. ನಮ್ಮದೊಂದು ಟೀಂ ಇದೆ. ಅದರ ಜತೆಗೆ ಕೆಲಸ ಮಾಡಿದಾಗ ಉತ್ಕೃಷ್ಟವಾದ ಕೆಲಸ ಮಾಡಿದ್ದೇವೆ. ನನಗೆ ಪ್ರೇರಕ ಶಕ್ತಿಯಾಗಿ ನರಹಳ್ಳಿ ಬಾಲಸುಬ್ರಹ್ಮಣ್ಯ, ಎಚ್.ಎಸ್. ವೆಂಕಟೇಶಮೂರ್ತಿ, ಬಿ.ಆರ್. ಲಕ್ಷ್ಮಣರಾವ್, ವ್ಯಾಸರಾವ್ – ಈ ನಾಲ್ಕೂ ಜನ ಒಟ್ಟಾಗಿ ಕೊಟ್ಟ ಶಕ್ತಿ ಅನನ್ಯ.

ವ್ಯಾಸನಿಗೂ ಕವಿ ಗೋಪಾಲಕೃಷ್ಣ ಅಡಿಗರಿಗೂ ಆತ್ಮೀಯ ಸ್ನೇಹವಿತ್ತು. ಅದರ ಬಲದಿಂದಲೇ ಅಡಿಗರು ನನ್ನ ಮೊದಲ ಸಿನಿಮಾ 'ಗ್ರಹಣ'ಕ್ಕೆ ಕ್ಲಾಪ್ ಮಾಡಿದ್ದರು. ಎಸ್. ದಿವಾಕರ್ ಅವರು